ಹೋಗಬೇಕಾದ್ದೇನೂ ಇರಲಿಲ್ಲ, ಹಾಗೇನಾದರೂ ಇತ್ತೇ? ಅದೇನು ರೇಸ್ ಕುದುರೆಯಾಗಿತ್ತೇ? ಅದೊಂದು ನಿಶ್ಶಕ್ತ ಕುದುರೆ. ಪೂರಾ ಸುಸ್ತಾದ ಮುದಿಗುದುರೆ! ಮೂರ್ಖ, ಕುಡುಕ ರೈತರು ಯಾವಾಗಲೂ ಹೀಗೆ ಶರವೇಗದಲ್ಲೆ ಹೋಗಲಿಕ್ಕೆ ಬಯಸ್ತಾರೆ... ಅನಂತರ ಯಾವಾಗ ಮಂಜಿನ ಹೊಂಡಕ್ಕೋ ಪ್ರಪಾತಕ್ಕೋ ಬೀಳ್ತಾರೋ ಆಗ ಬೇರೆ ಯಾರಾದ್ರೂ ಅವರನ್ನು ಮೇಲಕ್ಕೆತ್ತಬೇಕಾಗ್ತದೆ ಮತ್ತು ಆರೈಕೆ ಮಾಡಬೇಕಾಗ್ತದೆ. ನನಗೆ ನನ್ನದೇ ದಾರಿ ಇದ್ದಿದ್ದರೆ, ಅವರು ಗಡಿಬಿಡಿಯಲ್ಲಿ ಮರಿದೇ ಇರೋ ಹಾಗೇ, ನಾನವರಿಗೆ ಟರ್ಪಂಟೈನ್ ಬಳಸೋಕೆ ಹೇಳ್ತಿದ್ದೆ. ಅಷ್ಟಕ್ಕೂ ನಾನ್ಯಾಕೆ ತೀರಾ ಕಳಪೆ ಎಲೆಗಳ ಮುನ್ನಡಿಸಿದ್ನೋ. ಎಕ್ಕವನ್ನೇನಾದರೂ ಮುನ್ನಡಿಸಿದ್ರೆ, ಹೀಗೆ ಹೊಂಡದಲ್ಲಿ ನಾನು ಬೀಳ್ತಾನೇ ಇರಲಿಲ್ಲ."

"ಮೆತ್ತನೆ ಕುಸಿಯುವ ನೇಗಿಲ ಓಳಿಯ ಮೇಲೆ
ಜಾರುತ್ತದೆ ಬಂಡಿ ರಾಜಾರೋಷದಿ
ಮೆತ್ತಗೆ ಕುಸಿಯುವ ನೇಗಿಲ ಓಳಿಯ ಮೇಲೆ"

"ಕುಸಿಯುವ—ಕುಸಿಯುವ ಓಳಿಗಳೇ—ಇದೆಂಥ ಮರಳು! ಆ ಲೇಖಕರಿಗೆಲ್ಲಾ ಜನ ಮನ ಬಂದದ್ದನ್ನು ಗೀಚೋಕೆ ಬಿಡುವರು. ಆ ಹತ್ತು ನಂಬರಿನ

